ನನ್ನ ಓದು

# ಮಾರುಕಟ್ಟೆ ಎಂಬ ಅಮಾನುಷ ಜಗತ್ತಿನ ಕಥೆಗಳು



ವಿಕ್ರಮ ವಿಸಾಜಿ

ಮಹಾಂತೇಶ ನವಲಕಲ್ ಮೊದಲಿನಿಂದಲೂ ಹೊಸ ಜಾಡಿನ ಕಥೆಗಳನ್ನು ಹೇಳತೊಡಗಿದ ಕಥೆಗಾರ. ಕನ್ನಡ ಕಥನಶಕ್ತಿಯ ಹೊಸ ಸಾಧ್ಯತೆಯೊಂದನ್ನು ದಿಟ್ಟವಾಗಿ ತೋರಿದವರು. 'ಬುದ್ಧ ಗಂಟೆಯ ಸದ್ದು' ಕಥೆಗಳ ಸಂಕಲನದಲ್ಲೂ ಅವರ ಈ ಹುಡುಕಾಟ ಮುಂದುವರಿದಿದೆ. ಕನ್ನಡದಲ್ಲಿ ಅಷ್ಟಾಗಿ ಯಾರೂ ಗಮನಿಸದ ಗ್ರಾಮೀಣ ಜಗತ್ತಿನ ಕೃಷಿ ಚಟುವಟಿಕೆ ಮತ್ತು ಅದನ್ನು ಆಪೋಷನ ತೆಗೆದುಕೊಳ್ಳುತ್ತಿರುವ ಅಂತರರಾಷ್ಟ್ರೀಯ ಮಾರುಕಟ್ಟೆ ಅವರ ಕಥೆಗಳ ಕೇಂದ್ರದಲ್ಲಿವೆ.

ಕಣ್ಣಿಗೆ ಕಾಣದ ಶೋಷಣೆಯೊಂದು ರೈತರನ್ನು ಸಾವಿನ ಬಾಗಿಲಲ್ಲಿ ನಿಲ್ಲಿಸಿದೆ. ಇಲ್ಲಿನ ಈ ಶೋಷಣೆಯನ್ನು ಸೃಷ್ಟಿಸಿದ್ದು ಅಂತರರಾಷ್ಟ್ರೀಯ ಮಾರುಕಟ್ಟೆ, ಸ್ಥಳೀಯ ವಿಜ್ಞಾನಿಗಳು ಮತ್ತು ವ್ಯಾಪಾರಸ್ಥರು. ಲಾಭಬಡುಕತನ, ಭೋಗಲಾಲಸೆ, ರೈತರ ಹೆಣಗಳ ಮೇಲೆ ನಡೆಯುತ್ತಿರುವ ರಾಜಕಾರಣದಲ್ಲಿ ಎಲ್ಲರೂ ಪಾಲುದಾರರು, ಕೆಲವೊಮ್ಮೆ ಮೂಕಪ್ರೇಕ್ಷಕರು. ತಮಗೆ ಗೊತ್ತೇ ಆಗದ ಜಾಲದಲ್ಲಿ ರೈತರು ಸಿಲುಕಿದ್ದಾರೆ. ಅವರನ್ನು ಮುನ್ನಡೆಸುತ್ತಿರುವ, ಬಲೆಗೆ ಕೆಡುವುತ್ತಿರುವ ಕೈಗಳು ದೇಶ ಮತ್ತು ವಿದೇಶಗಳಲ್ಲಿ ಹರಡಿಕೊಂಡಿವೆ. ಎಲ್ಲಿ ಒಂದು ದೇಶವಿತ್ತೊ ಅಲ್ಲೀಗ ಕೇವಲ ಒಂದು ಮಾರುಕಟ್ಟೆ ಇರುವುದನ್ನು ಮಹಾಂತೇಶರ ಕಥೆಗಳು ದಟ್ಟವಾಗಿ ಕಾಣಿಸಿವೆ. ದೇಶವು ಮಾರುಕಟ್ಟೆಯನ್ನು ನಿಯಂತ್ರಿಸುತ್ತಿಲ್ಲ, ಮಾರುಕಟ್ಟೆಯು ದೇಶವನ್ನು ನಿಯಂತ್ರಿಸುತ್ತಿದೆ. ಕಣ್ಣಿಗೆ ಕಾಣದ ವ್ಯವಸ್ಥೆಯ ಗಾಯಗಳು ಇಲ್ಲಿವೆ. ಈ ದುರಂತವನ್ನು ಕಥೆಯಾಗಿಸಿರುವುದು ಈ ಸಂಕಲನದ ಯಶಸ್ಸು, ಇದೇ ಹೊಸ ಜಾಡು. ಇಂಥಲ್ಲಿ ಮನುಷ್ಯರ ದ್ವಂದ್ವ, ಆತ್ಮಪರೀಕ್ಷೆ, ತಾನೇ ಸೃಷ್ಟಿಸಿಕೊಂಡ ಬಲೆಯಿಂದ ಹೊರಬರಲಾಗದ ಅಸಹಾಯಕತೆ ಎಲ್ಲವೂ ಸೇರಿ ಕಥೆಗಳು ಮನುಷ್ಯನಾಳದ ಸಂಕಟಗಳಿಗೂ ದನಿಯಾಗಿವೆ. ಹೀಗಾಗಿಯೇ ಕಥೆಗಳಲ್ಲಿ ಕೇವಲ ಮಾಹಿತಿಯಾಗಿ ಉಳಿಯಬಹುದಾಗಿದ್ದ ಸಂಗತಿಗಳು 'ಕಾಣ್ಕೆ'ಯಾಗಿ ಬದಲಾಗಿವೆ. ಇಲ್ಲಿನ ವಸ್ತುಗಳಿಗೆ ಬೇಕಾದ ಸೂಕ್ಷ್ಮ ಕಥನಗಾರಿಕೆಯನ್ನೂ ಮಹಾಂತೇಶ ಬಹುತೇಕ ಕಥೆಗಳಲ್ಲಿ ಕಂಡುಕೊಂಡಿದ್ದಾರೆ.

'ಬುದ್ಧ ಗಂಟೆಯ ಸದ್ದು' ಕಥೆಯ ನಾಯಕ ಅತ್ಯಧಿಕ ಮಾರಾಟದ ಲಾಭವನ್ನು ತೋರಿಸಿದ್ದರಿಂದ,